ತ್ತಿದ್ದು, ಬೇಸಾಯದ ಭೂಮಿ ತೆಂಗಿನ ಮರಗಳು, ಮನೆಗಳು ದೇವಸ್ಥಾನಗಳು ಶಾಲೆ ಇತ್ಯಾದಿಗಳಿಗೆ ಅಪಾರ ಹಾನಿಯಾಗುವ ಸಂಭವ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಸದರಿ ಕೊರೆತದಿಂದ ರಕ್ಷಣೆ ನೀಡಲು ಯಾವ ಕ್ರಮಂ ಕೈಗೊಳ್ಳಲಾಗುವುದು ಮತ್ತು ಯಾವಾಗ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ. ಹೌದು.

ಆ. ನಾವುಂದ ಗ್ರಾಮದ ಅರಹೊಳೆ ದೇವಸ್ಥಾನದ ಬಳಿ ೯.೭೫೦,೦೦ ರೂ.ಗಳ ಅಂದಾಜು ವೆಚ್ಚದಲ್ಲಿ ತಡೆಗೋಡೆ ಕೆಲಸವನ್ನು ಪ್ರಾರಂಭಿಸಲಾಗಿದೆ. ಉಳಿದ ಕೆಲಸಗಳನ್ನು ಹಂತ ಹಂತವಾಗಿ ಪಶ್ಚಿಮ ಘಟ್ಟ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಕೈಗೊಳ್ಳುವ ವಿಷಯ ಪರಿಶೀಲನೆಯಲ್ಲಿದೆ.

ಖಾನಾಪುರ ತಾಲ್ಲೂಕಿನಲ್ಲಿ ಹರಿಯುವ ಮಾದವಿ ನದಿಯ ಬಗ್ಗೆ

೧೫೪೩. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. ಖಾನಾಪುರ ತಾಲ್ಲೂಕಿನಲ್ಲಿ ಹರಿಯುತ್ತಿರುವ ಮಾದಾವಿ ನದಿ ನಿಸ್ಸ್ವಾರ್ಥ ಯೋಜಕವಾಗಿ ಹರಿದು ಹಂಚಿ ಹೋಗಿ ಗೋವಾ ರಾಜ್ಯದಲ್ಲಿ ಅರಬ್ಬಿ ಸಮುದ್ರ ಸೇರುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೆ.

ಆ. ಆ ನದಿಯ ನೀರನ್ನು ಮಲಪ್ರಭಾ ನದಿಗೆ ಸೇರಿಸಲು ಸರ್ಕಾರದವರು ಕ್ರಮ ತೆಗೆದು ಕೊಳ್ಳುವರೇ ?

ಇ. ಈ ದಿಶೆಯಿಂದ ಮಲಪ್ರಭಾ ನದಿಯಲ್ಲಿರುವ ನೀರಿನ ಪ್ರಮಾಣ ಎರಡು ಪಟ್ಟು ಹೆಚ್ಚು ಸಂಗ್ರಹವಾಗಿ ಬಾದಾಮಿ, ರೋಣ, ರಾಮದುರ್ಗ, ನರಗುಂದ ತಾಲ್ಲೂಕುಗಳ ಜಮೀನುಗಳನ್ನು ಪೂರ್ತಿ ನೀರಾವರಿಗೊಳಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ. ಗೊತ್ತಿದೆ.

ಆ. ಸರ್ಕಾರಿ ಆದೇಶದಂತೆ ಸದ್ಯಕ್ಕೆ ಮಹಾದಾಯಿ ನೀರನ್ನು ಜಲ ವಿದ್ಯುತ್ ಉತ್ಪಾದನೆಗೆ ವಿನಿಯೋಗಿಸಲಿಲ್ಲದಿರುವುದರಿಂದ ಕೃಷ್ಣ ಜಲಾನಯನ ತಾಂತ್ರಿಕ ಸಮಿತಿಯು ಮಹಾದಾಯಿ ನೀರನ್ನು ಮಲಪ್ರಭಾ ಯೋಜನೆಯಲ್ಲಿ ಇರುವ ಅಭಾವವನ್ನು ನೀಗಿಸಲು ಉಪಯೋಗಿಸಲು ಶಿಫಾರಸ್ಸು ಮಾಡಿದೆ. ಈ ಶಿಫಾರಸ್ಸು ಸರ್ಕಾರದ ಪರಿಶೀಲನೆಯಲ್ಲಿದೆ.

ಇ. ಮೇಲೆ ತಿಳಿಸಿರುವಂತೆ, ಪರಿಶೀಲನೆಯ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಸರಕಾರಿ ನೌಕರರು ಒಂದೇ ಸ್ಥಳದಲ್ಲಿ ಕೆಲಸ ಮಾಡುವ ಬಗ್ಗೆ

೧೨೦೭. ಶ್ರೀ ಐ. ಜಿ. ಶಂಕರ (ಚಿಕ್ಕಮಗಳೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅನೇಕ ವರ್ಷಗಳಿಂದ ಒಂದೇ ಊರಿನಲ್ಲಿ ಕೆಲಸ ಮಾಡುತ್ತಾ ಇರುವ ನೌಕರರ ವಿಚಾರ ಸರಕಾರದವರ ಗಮನದಲ್ಲಿದೆಯೇ.

ಆ) ಒಂದೇ ಊರಿನಲ್ಲಿ ೫ ವರ್ಷ ಸೇವೆ ಸಿಗಧಿ ಪಡಿಸಿರುವಾಗ ಅದನ್ನು ಅಸಂಸರಿಸದೇ ಗ್ರಾಮಾಂತರ ಪ್ರದೇಶಗಳಲ್ಲಿರುವವರಿಗೆ ಪಟ್ಟಣಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ಕೊಡದಿರಲು ಕಾರಣವೇನು?

ಇ) ೫ ವರ್ಷಕ್ಕಿಂತ ಹೆಚ್ಚು ಕಾಲ ಒಂದೇ ಊರಿನಲ್ಲಿ ಸಲ್ಲಿಸುವಾರದೆಂಬ ಕಾನೂನನ್ನು ಜಾರಿಗೆ ಗೊಳಿಸಲು ಸೂಚನೆ ಕೊಡಲಾಗುವುದೇ?